CAREERINDIA

**SL. No. : Z**

ಒಟ್ಟು ಪ್ರಶ್ನೆಗಳ ಸಂಖ್ಯೆ : 58 ]
Total No. of Questions : 58 ]

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 62-K** **Code No. : 62-K**

ಇಲ್ಲಿಂದ ಕತ್ತರಿಸಿ

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

ದಿನಾಂಕ : 10. 04. 2017 ] [ Date : 10. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 58 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

www.careerindia.com

CAREERINDIA



## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** 16 × 1 = 16

1. ಗೊರೂರರು ಅಮೆರಿಕಾಕ್ಕೆ ಹೋಗಿದ್ದಾಗ ತಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಂಡರು ?
2. ಪೊಲೀಸನ ಮನೆಯಲ್ಲಿ ಗೊರೂರವರಿಗೆ ರಾತ್ರಿ ಊಟಕ್ಕೆ ಏನೇನು ದೊರೆಯಿತು ?
3. ಕನ್ನಡಿಗರ ಯಾವ ಗುಣ ಅನುಕರಣೀಯವಾದುದೆಂದು ರಾಜರತ್ನಂ ಹೇಳಿದ್ದಾರೆ ?
4. ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೇ ಬಂದದ್ದೇಕೆ ?
5. ಸಂನ್ಯಾಸಿ ವೇಷಧರಿಸಿದ ಸರದಾರನ ಹೆಸರೇನು ?
6. ಈಶಪ್ರಭುವು ಯಾವ ವಿಚಾರಕ್ಕಾಗಿ ಹೆಂಡತಿಯಿಂದ ಪ್ರಮಾಣ ಮಾಡಿಸಿಕೊಂಡನು ?
7. ನಾ. ಕಸ್ತೂರಿಯವರದು ಯಾವ ಯಾವ ಕ್ಷೇತ್ರಗಳಲಿ ಮರೆಯಲಾರದ ಹೆಸರು ?
8. ಕೆ.ಎಸ್. ನಿಸಾರ್ ಅಹಮದ್‌ರವರು ಯಾರು ಯಾರು ಒಂದೇ ಎಂದು ಹೇಳಿದ್ದಾರೆ ?
9. ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಏನಾಗುತ್ತೇವೆಂದು ಬಿ.ಆರ್. ಲಕ್ಷ್ಮಣರಾವ್ ಹೇಳಿದ್ದಾರೆ ?
10. ಬಡತನಕ್ಕೆ ಯಾವ ಚಿಂತೆ ಕಾಡುವುದು ಎಂದು ಅಂಬಿಗರ ಚೌಡಯ್ಯನು ಹೇಳಿದ್ದಾನೆ ?
11. ಪರಮಾತ್ಮನನ್ನು ಕಾಣಲು ಏನನ್ನು ದಂಡಿಸಬೇಂದು ಪುರಂದರದಾಸರು ಹೇಳಿದ್ದಾರೆ ?
12. ರೈತನಿಗೆ ಮೋಡಗಳು ಹೇಗೆ ಕಾಣುತ್ತಿದ್ದವು ?
13. ಪುಲಿಗೆರೆ ಕವಿ ಸೋಮನು ಎಂಥವನು ದೊರೆಯಾಗಬೇಕೆಂದು ಹೇಳಿದ್ದಾನೆ ?
14. ಪುಲಿಗೆರೆ ಕವಿ ಸೋಮನ ಪ್ರಕಾರ ಮಗನಿಗೆ ಇಂಬೇಕಾದ ಅರ್ಹತೆ ಯಾವುದು ?
15. ಧರ್ಮಪದನ ತಂದೆಯ ಹೆಸರೇನು ?
16. ಧರ್ಮಪದನು ಕೋನಾರ್ಕ ದೇವಾಲಯಕ್ಕೆ ಏಕೆ ಬಂದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 14 × 2 = 28

17. ಗೊರೂರು ರಾಮಸ್ವಾಮಿ ಅಯ್ಯಂಗಾರರು ಅಮೆರಿಕಾದ ಮಿನಿ ಪೊಲೀಸ್ ನಗರಕ್ಕೆ ಹೋದಾಗ ಎದುರಿಸಿದ ಸಮಸ್ಯೆಗಳಾವುವು ?
18. ಕರ್ನಾಟಕ ರಾಜ್ಯದ ಉದಯವಾದದ್ದು ಸಾರ್ಥಕವಾಗಬೇಕಾದರೆ ನಾವು ಏನು ಮಾಡಬೇಕೆಂದು ರಾಜರತ್ನಂ ಹೇಳುತ್ತಾರೆ ?
19. ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?
20. ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಅನಿಲ್ ಕುಂಬ್ಳೆಯವರ ಪಾತ್ರವೇನು ?



www.careerindia.com

CAREERINDIA



21. ಕುಲಕರ್ಣಿಯ ಪಿಸ್ತೂಲು ಮತ್ತು ರಾಮಸಿಂಗ್ ಹಿಡಿದಿದ್ದ ಧ್ವಜ ಇವುಗಳಲ್ಲಿ ಯಾವುದು ಶ್ರೇಷ್ಠ ? ಏಕೆ ?

22. ರಾಣಿ ಅಬ್ಬಕ್ಕದೇವಿಯ ಕುರಿತು ಜಿನೋವ ಪ್ರವಾಸಿ ಪಿತ್ರೋ ಆಡಿದ ಮಾತುಗಳಾವುವು ?

23. ಮೊಘಲ್ ಸೇನೆಯು ಪಲಾಯನ ಗೈಯುವಂತೆ ಮಾಡಲು ಕೆಳದಿಯ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳನ್ನು ವಿವರಿಸಿ.

24. ಕೋಗಿಲೆಯು ನಮಗೆ ಯಾವ ರೀತಿ ಅಮೃತವನ್ನು ನೀಡಬೇಕೆಂದು ಕವಿ ಚೆನ್ನವೀರ ಕಣವಿಯವರು ಕೋರಿದ್ದಾರೆ ?

25. ಕೋಗಿಲೆಯ ಹಾಡಿನ ತರಂಗಗಳ ಪರಿಣಾಮ ಏನಾಗಿದೆ ?

26. ಎಲ್ಲಾ ಧರ್ಮಗಳ ಸಾರ ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್ ತಮ್ಮ ಕವನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾರೆ ?

27. ಅಕ್ಷರವು ನಮಗೆ ಹೊಸ ಜೀವನ ಮತ್ತು ಹೊಸ ರೂಪವನ್ನು ಹೇಗೆ ಕೊಡುತ್ತದೆಯೆಂದು ಬಿ.ಆರ್. ಲಕ್ಷ್ಮಣರಾವ್ ಹೇಳಿದ್ದಾರೆ ? ವಿವರಿಸಿ.

28. ಮಳೆ ದೇವರಲ್ಲಿ ರೈತರ ಪ್ರಾರ್ಥನೆಯನ್ನು 'ಜಾನಪದ' ಪದ್ಯದಲ್ಲಿ ಹೇಗೆ ವರ್ಣಿಸಲಾಗಿದೆ ?

29. ಮೋಡಗಳು ಕಾಣಿಸಿಕೊಂಡಾಗ ರೈತರು ಹೇಗೆ ಸಂಭ್ರಮಿಸಿದರು ?

30. ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲೇ ಹಾದು ಹೋದಾಗ ಈರಪ್ಪ ಎಂ. ಕಂಬಳಿಯವರಿಗೆ ಉಂಟಾದ ಅನುಭವಗಳನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** 4 × 3 = 12

31. "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ."

32. "ಹೆಣ್ಣು ಮಗಳೇ, ಆ ಧ್ವಜವನ್ನು ಮೊದಲು ಕೆಳಗಿಡು"

33. "ಜಗದ ಬಿನದ ನಿನ್ನ ಮುದದ ಗಾನವಾಯ್ತೆ ?"

34. "ಹೆಂಡಿರಾದರೆ ಮಕ್ಕಳ ಚಿಂತೆ"

35. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ನಾವು ನೀವು ..........................................................

.....................................................................

.....................................................................

............................................................ ಇಂದೆ.

***ಅಥವಾ***

www.careerindia.com

CAREERINDIA



ಕರ್ನಾಟಕ ..........................................................

..........................................................................

..........................................................................

.................................................................... ಒಂದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

36. ಅ.ರಾ. ಮಿತ್ರ

37. ಬಿ.ಆರ್. ಲಕ್ಷ್ಮಣರಾವ್

**ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು–ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

38. ಅನಿಲ್ ಕುಂಬ್ಳೆಯವರ ಸಾಧನೆಗೆ ಸಂದ ಗೌರವಗಳಾವುವು ? ವಿವರಿಸಿ.

***ಅಥವಾ***

ಕ್ರಿಕೆಟ್ ಆಟದಲ್ಲಿ ಅನಿಲ್ ಕುಂಬ್ಳೆಯವರ ಸಾಧನೆಗಳೇನು ? ವಿವರಿಸಿ.

39. ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ತಿಳಿಸಿ.

***ಅಥವಾ***

ಪುರಂದರದಾಸರು ಬರೆದ 'ದಾಸರ ಪದಗಳು' ಪದ್ಯದ ಸಾರಾಂಶವನ್ನು ಬರೆಯಿರಿ.

## ವಿಭಾಗ – 'ಬಿ'
## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

40. ಕನ್ನಡ ವರ್ಣಮಾಲೆಯಲಿರುವ ಒಟ್ಟು ಅನುನಾಸಿಕಾಕ್ಷರಗಳ ಸಂಖ್ಯೆ

(ಎ) ಹತ್ತು (ಬಿ) ಹದಿಮೂರು

(ಸಿ) ಐದು (ಡಿ) ಒಂಬತ್ತು



www.careerindia.com

CAREERINDIA



41. 'ಬಿಜ್ಜೋದರ' — ಈ ಪದದ ತತ್ಸಮ ರೂಪ

(ಎ) ವಿದ್ಯಾಧರ (ಬಿ) ವಿದ್ಯೋದರ

(ಸಿ) ವಿದ್ಯಾವರ (ಡಿ) ವಿದುವರ

42. 'ಹನುಮನಂತೆ ನೀ ವಿಕಾಸಗೊಳ್ಳುವೆ' ಈ ವಾಕ್ಯದಲ್ಲಿರುವ ಅಲಂಕಾರ

(ಎ) ರೂಪಕ (ಬಿ) ದೃಷ್ಟಾಂತ

(ಸಿ) ಉತ್ಪ್ರೇಕ್ಷೆ (ಡಿ) ಉಪಮಾ

43. ನನ್ನ ಕೈಯಲ್ಲಿ ಏನಿದೆ ನೋಡಿದಿರಾ ? ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ

(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ

(ಸಿ) ಉದ್ಧರಣ (ಡಿ) ಆವರಣ

44. 'ಮನೆಮಠ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ

(ಸಿ) ಜೋಡುನುಡಿ (ಡಿ) ನುಡಿಗಟ್ಟು

45. 'ವಿದೇಶ' ಪದದ ವಿರುದ್ಧಾರ್ಥಕ ಪದ

(ಎ) ಪರದೇಶ (ಬಿ) ಹತ್ತಿರದ ದೇಶ

(ಸಿ) ದೂರದ ದೇಶ (ಡಿ) ಸ್ವದೇಶ

46. 'ಕೈಮುಗಿ' ಪದದಲ್ಲಿ ಆಗಿರುವ ಸಮಾಸ

(ಎ) ಕ್ರಿಯಾ (ಬಿ) ಕರ್ಮಧಾರೆಯ

(ಸಿ) ದ್ವಿಗು (ಡಿ) ತತ್ಪುರುಷ

47. 'ದೀಪಾಲಂಕಾರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ಆದೇಶ ಸಂಧಿ (ಡಿ) ಆಗಮ ಸಂಧಿ

www.careerindia.com

CAREERINDIA



48. 'ಬೆರಗು' ಪದದ ಸಮನಾರ್ಥಕ ಪದ

(ಎ) ಹೆದರು (ಬಿ) ಬೆಳಕು

(ಸಿ) ಆಶ್ಚರ್ಯ (ಡಿ) ಭಯ

49. ಮಕ್ಕಳು ಶಾಲೆಗೆ ಬರುತ್ತಾರೆ. ಆದರೆ ಪಾಠ ಹೇಳಲು ಸಾಕಷ್ಟು ಶಿಕ್ಷಕರಿಲ್ಲ. ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ

(ಸಿ) ಅಲಂಕಾರಿಕ ವಾಕ್ಯ (ಡಿ) ಸಂಯೋಜಿತ ವಾಕ್ಯ

50. 'ರಾಮಸಿಂಗನು ಸ್ವಾತಂತ್ರ್ಯ ಹೋರಾಟಕ್ಕಾಗಿ ಸರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದಾನೆ.' ಈ ವಾಕ್ಯದಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ

(ಎ) ಸರ್ವಸಿದ್ಧತೆಯನ್ನು (ಬಿ) ಹೋರಾಟಕ್ಕಾಗಿ

(ಸಿ) ರಾಮಸಿಂಗನು (ಡಿ) ಸ್ವಾತಂತ್ರ್ಯ

51. ನಾಮಪದದ ಬದಲಾಗಿ ಬಳಸುವ ಪದ

(ಎ) ಧಾತು (ಬಿ) ಸರ್ವನಾಮ

(ಸಿ) ವಿಭಕ್ತಿ (ಡಿ) ನಾಮಪ್ರಕೃತಿ

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಪೂರ್ಣಿಮಾ ಬಡ ಮನೆತನದಲ್ಲಿ ಹುಟ್ಟಿದ ಹೆಣ್ಣು ಮಗಳು. ಆದರೂ ಮುದ್ದಿನಿಂದ ಸೊಂಪಾಗಿ ಬೆಳೆದು ಹುಣ್ಣಿಮೆ ಚಂದ್ರನ ಹಾಗೆ ಮೈಕೈ ತುಂಬಿಕೊಂಡಿದ್ದಳು. ದುರದೃಷ್ಟ, ವರದಕ್ಷಿಣೆ ಕೊಡಲಾರದೆ ಅವಳ ತಾಯಿ–ತಂದೆ ಅವಳನ್ನು ಇಪ್ಪತ್ತು ಜನರಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದರು. ಅವಳ ಪಾಲಿನ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. ಮುಂಜಾನೆಯಿಂದ ಸಂಜೆಯವರೆಗೆ ಅವಳದು ಇದೇ ಕೆಲಸ. ಒಂದು ತಿಂಗಳು ಕಳೆಯುವುದರೊಳಗೆ, ರಾತ್ರಿ ಮಲಗಿದಾಗಲೂ



www.careerindia.com

CAREERINDIA



ಅವಳ ಕೈಗಳು ರೊಟ್ಟಿ ಬಡಿಯುತ್ತ ಕೆಲಸ ಮುಂದುವರಿಸುತ್ತಿದ್ದಳು. ಇದರಿಂದ ಅವಳ ಗಂಡನ ಬೆನ್ನು ನೀಲಿಗಟ್ಟಿತ್ತು.

*ಪ್ರಶ್ನೆಗಳು :*

52. ಪೂರ್ಣಿಮಾ ನೋಡಲು ಹೇಗಿದ್ದಳು ?

53. ಪೂರ್ಣಿಮಾಳನ್ನು ದೊಡ್ಡ ಕುಟುಂಬಕ್ಕೆ ಏಕೆ ಸೊಸೆಯನ್ನಾಗಿ ಮಾಡಿದರು ?

54. ಪ್ರತಿದಿನ ಪೂರ್ಣಿಮಾಳ ಪಾಲಿನ ಕೆಲಸ ಯಾವುದಾಗಿತ್ತು ?

55. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿತ್ತು ಏಕೆ ?

56. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ *ಒಂದನ್ನು* ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಹಾಸಿಗೆ ಇದ್ದಷ್ಟು ಕಾಲು ಚಾಚು
* ಕೈ ಕೆಸರಾದರೆ ಬಾಯಿ ಮೊಸರು
* ಚಿಂತೆಯೇ ಮುಪ್ಪು ಸಂತೋಷವೇ ಯೌವನ

57. ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ 'ಕಾರ್ತಿಕ್ / ಕವಿತಾ' ಎಂದು ಭಾವಿಸಿಕೊಂಡು, ಅಕ್ಕನ ಮದುವೆಯ ಪ್ರಯುಕ್ತ ನಾಲ್ಕು ದಿವಸ ರಜೆ ನೀಡಲು ಅನುಮತಿ ಕೇಳಿ ಶಾಲಾ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. 1 × 4 = 4

***ಅಥವಾ***

ನಿಮ್ಮನ್ನು ಹೊನ್ನಾವರದ ಶ್ರೀ ಕರಿಕಾನ ಪರಮೇಶ್ವರಿ ಪ್ರೌಢಶಾಲೆಯ 'ಮಧುಮಿತಾ / ಮಧುಕರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವವನ್ನು ಕುರಿತು 'ಗೆಳೆಯ / ಗೆಳತಿ'ಗೊಂದು ಪತ್ರ ಬರೆಯಿರಿ.

58. **ಈ ಕೆಳಗಿನ ಯಾವುದಾದರೂ *ಒಂದು* ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** 1 × 4 = 4

* ರಾಷ್ಟ್ರೀಯ ಹಬ್ಬಗಳು
* ದೂರದರ್ಶನ
* ಸ್ವಚ್ಛತಾ ಆಂದೋಲನ



www.careerindia.com

www.careerindia.com